**ಕರ್ನಾಟಕ ಸರ್ಕಾರ**

**(ಪೊಲೀಸ್ ಇಲಾಖೆ)**

ಸಂಖ್ಯೆ:60/ಎಂಎಜಿ(3)/ಎಕ್ಸ್‌ಪ್ಲೋಸಿವ್/2015

ಪೊಲೀಸ್ ಆಯುಕ್ತರವರ ಕಛೇರಿ,
ಬೆಂಗಳೂರು ನಗರ,
ದಿನಾಂಕ: 20.10.2015

# ಪ್ರ ಕ ಟ ಣೆ

2015ನೇ ಸಾಲಿನ ದೀಪಾವಳಿ ಹಬ್ಬದ ಪ್ರಯುಕ್ತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಆಯ್ದ ಮೈದಾನಗಳಲ್ಲಿ ಚಿಲ್ಲರೆಯಾಗಿ ಪಟಾಕಿ ಮಳಿಗೆಗಳನ್ನು ತೆರೆಯಲು ಸಾರ್ವಜನಿಕರಿಂದ ಅರ್ಜಿಗಳನ್ನು ಕರೆಯಲಾಗಿದೆ. ಆಸಕ್ತಿಯುಳ್ಳವರು ರೂ.2,000/- ಗಳ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಡಿ.ಜಿ.ಪಿ ಮತ್ತು ಡೈರೆಕ್ಟರ್, ಕರ್ನಾಟಕ ಫೈರ್ ಅಂಡ್ ಎಮೆರ್ಜೆನ್ಸಿ ಸರ್ವಿಸಸ್, ಬೆಂಗಳೂರು ರವರಿಗೂ ಹಾಗೂ 1,000/- ರೂಗಳ (ಅರ್ಜಿ ಶುಲ್ಕ ಮತ್ತು ನಿರ್ವಹಣಾ ವೆಚ್ಚಗಳ) ಪ್ರತ್ಯೇಕ ಡಿಮ್ಯಾಂಡ್ ಡ್ರಾಫ್ಟ್ ಅನ್ನು ಮಾನ್ಯ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಸಂದಾಯವಾಗುವಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಪಡೆದು ಅರ್ಜಿಯೊಂದಿಗೆ ಲಗತ್ತಿಸತಕ್ಕದ್ದು ಹಾಗೂ ಈ ಕೆಳಕಂಡ ಇತರೆ ದಾಖಲಾತಿಗಳನ್ನು ಲಗತ್ತಿಸತಕ್ಕದ್ದು.

(1) ಅರ್ಜಿದಾರರ ಇತ್ತೀಚಿನ 02 ಭಾವ ಚಿತ್ರಗಳು (ಮೂರು ತಿಂಗಳ ಒಳಗಿನ ಭಾವ ಚಿತ್ರಗಳು)

(2) ಅರ್ಜಿದಾರರ ವಾಸ ಸ್ಥಳದ ಬಗ್ಗೆ ರೇಷನ್ ಕಾರ್ಡ್/ಟೆಲಿಫೋನ್ ಬಿಲ್/ ಮತದಾರರ ಗುರುತಿನ ಚೀಟಿ/ಎಲೆಕ್ಟ್ರಿಕ್‌ಸಿಟಿ ಬಿಲ್ ಜೆರಾಕ್ಸ್ ಅಥವಾ ಇತರೆ ಯಾವುದೇ ಗುರುತಿನ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಲಗತ್ತಿಸುವುದು.

(3) ತಾವು ಅಥವಾ ತಮ್ಮ ಕುಟುಂಬದ ಸದಸ್ಯರು ಯಾವುದೇ ಒಂದು ಮೈದಾನದ ಪರವಾನಿಗೆ ಅರ್ಜಿಯನ್ನು ಸಲ್ಲಿಸಿದ್ದಲ್ಲಿ ಅದೇ ಮೈದಾನಕ್ಕೆ ಪ್ರತ್ಯೇಕ/ಬೇರೆ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ ಎಂಬುದರ ಬಗ್ಗೆ ಅಫಿಡವಿಟ್ ಪತ್ರ ಸಲ್ಲಿಸಬೇಕು.

(4) ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅರ್ಜಿದಾರರು TIN (ಟ್ಯಾಕ್ಸ್ ಪೇಯರ್ ಐಡೆಂಟಿಫಿಕೇಷನ್ ನಂಬರ್) ಅನ್ನು ವಾಣಿಜ್ಯ ತೆರಿಗೆ ಇಲಾಖೆಯ Karnataka Valued Added Tax Act, 2003 ರ ರೀತ್ಯಾ ಪಡೆಯಲು ಸೂಚಿಸಿರುವುದರಿಂದ, ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅರ್ಜಿದಾರನು ಕಡ್ಡಾಯವಾಗಿ ಅರ್ಜಿಯ ಜೊತೆ ಟಿನ್ ನಂಬರ್ ಅನ್ನು ಹೊಂದಿರತಕ್ಕದ್ದು. (ಟಿನ್ ನಂಬರ್ ಪ್ರತಿಯನ್ನು ಲಗತ್ತಿಸುವುದು)

(4) ಅರ್ಜಿದಾರರು ಖುದ್ದಾಗಿ ಅರ್ಜಿಯನ್ನು ದಿನಾಂಕ: 26/10/2015 ರಿಂದ ದಿ:30/10/2015 ರ ವರೆಗೆ ಬೆಳಿಗ್ಗೆ 11.00 ರಿಂದ 05.00ರ ಒಳಗೆ ಬಂದು ಉಪ ಪೊಲೀಸ್ ಆಯುಕ್ತರ ಕಛೇರಿ, ಸಿ.ಎ.ಆರ್. (ಕೇಂದ್ರ), ಮೈಸೂರು ರಸ್ತೆ, ಬೆಂಗಳೂರು – 560018 ಇಲ್ಲಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು.

(5) ದಿನಾಂಕ: 30/10/2015 ರ ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸುವುದಿಲ್ಲ ಮತ್ತು ಮೇಲೆ ನಮೂದಿಸಿದ ದಾಖಲಾತಿಗಳಿಲ್ಲದಿದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಪಟಾಕಿಗಳ ಮಾರಾಟ ಸಂಬಂಧದಲ್ಲಿ ತಾತ್ಕಾಲಿಕ ಪರವಾನಗಿಯನ್ನು ಲಾಟರಿಗಳ ಮೂಲಕ ಹಂಚಿಕೆ ಮಾಡಲಾಗುವುದು ಹಾಗೂ ಅರ್ಜಿ ನಮೂನೆ ಮತ್ತು ಮೈದಾನಗಳ ವಿವರಗಳನ್ನು **ಉಪ ಪೊಲೀಸ್ ಆಯುಕ್ತರ ಕಛೇರಿ, ಸಿ.ಎ.ಆರ್. (ಕೇಂದ್ರ), ಮೈಸೂರು ರಸ್ತೆ,** ಬೆಂಗಳೂರು – 560 018 ಇಲ್ಲಿ ನೀಡಲಾಗುವುದು.

ಕೇವಲ ಆಯ್ದ ಮೈದಾನಗಳಲ್ಲಿ ಅಂದರೆ ಬೆಂಗಳೂರು ಮಹಾನಗರ ಪಾಲಿಕೆಯವರು ಸೂಚಿಸಿರುವ ಆಟದ ಮೈದಾನಗಳಿಗೆ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುವುದು.

**ಅರ್ಜಿಯಲ್ಲಿ ಅರ್ಜಿದಾರರ ಹೆಸರು ಹಾಗೂ ವಿಳಾಸ, ಕೇಳಿರುವ ಮೈದಾನದ ವಿವರ (ಕ್ರಮ ಸಂಖ್ಯೆ, ಯಾವ ಗುಂಪು (ಸಾಮಾನ್ಯ ವರ್ಗ(ಎ), ಸೊಸೈಟಿ/ಸಂಘ ಸಂಸ್ಥೆ(ಬಿ) ಅಂಗವಿಕಲರು (ಸಿ), ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು(ಡಿ)) ವಿವರಗಳು ದಾಖಲಾತಿಗಳ ಸಮೇತ ಒಳಗೊಂಡಿರಬೇಕು.**

ಆಯ್ದ ಮೈದಾನಗಳಲ್ಲಿನ ಮಳಿಗೆಗಳ ಸಂಖ್ಯೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳು ಸುರಕ್ಷತೆಯ ಹಿತದೃಷ್ಠಿಯಿಂದ ನಿಗಧಿಪಡಿಸಿರುತ್ತಾರೆ.

ಉಪ ಪೊಲೀಸ್ ಆಯುಕ್ತರ ಕಛೇರಿ, ಸಿ.ಎ.ಆರ್.(ಕೇಂದ್ರ), ಮೈಸೂರು ರಸ್ತೆ, ಬೆಂಗಳೂರು – 560 018 ಇಲ್ಲಿ ಸ್ವೀಕರಿಸಲಾದ ಅರ್ಜಿಗಳ ಸಂಬಂಧ ಚಿಲ್ಲರೆ ಪಟಾಕಿ ಮಾರಾಟ ಮಳಿಗೆಗಳಿಗೆ ತಾತ್ಕಾಲಿಕ ಪರವಾನಿಗೆಗಳನ್ನು ನೀಡಲು ದಿನಾಂಕ: 03/11/2015 ರಂದು ಬೆಳಿಗ್ಗೆ 12:00 ಗಂಟೆಗೆ **ಉಪ ಪೊಲೀಸ್ ಆಯುಕ್ತರ ಕಛೇರಿ, ಸಿ.ಎ.ಆರ್. (ಕೇಂದ್ರ), ಮೈಸೂರು ರಸ್ತೆ,** ಬೆಂಗಳೂರು – 560 018 ಆವರಣದಲ್ಲಿ ಲಾಟರಿ ನಡೆಸಲಾಗುವುದು ಹಾಗೂ ಲಾಟರಿ ಮೂಲಕ ಆಯ್ಕೆಯಾದ ಫಲಾನುಭವಿಗಳಿಗೆ ಪರವಾನಿಗೆಗಳನ್ನು ದಿನಾಂಕ: 05/11/2015 ರಂದು ನೀಡಲಾಗುವುದು.

ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಪೊಲೀಸ್ ಆಯುಕ್ತರವರ ಕಛೇರಿ ಹಾಗೂ ಉಪ ಪೊಲೀಸ್ ಆಯುಕ್ತರು. ಸಿ.ಎ.ಆರ್. (ಕೇಂದ್ರ), ಮೈಸೂರು ರಸ್ತೆ, ಬೆಂಗಳೂರು ರವರ ಕಛೇರಿಯನ್ನು ಸಂಪರ್ಕಿಸತಕ್ಕದ್ದು.